ಓ.ಎಸ್.ನಂ.428-2014
ಡಿ.ಡಬ್ಲ್ಯು-೧

ದಿ: 11-07-2024 ರಂದು ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>**: ವಾದಿ ಪರ ಶ್ರೀಯುತ ಕೆ.ಎಸ್.ಎಸ್ ವಕೀಲರಿಂದ.

ನಾನು ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ವಾದ ಪತ್ರದಲ್ಲಿ ಕಾಣಿಸಿರುವ ವಿಳಾಸದಲ್ಲಿ ಸುಮಾರು 20-30 ವರ್ಷಗಳಿಂದ ವಾಸವಾಗಿರುತ್ತೇನೆ. ವಾದಿಯ ಪರಿಚಯ ಇಲ್ಲ. ವಾದಿಯು ಯಾವ ಆಸ್ತಿಯ ಕುರಿತು ದಾವೆ ದಾಖಲಿಸಿದ್ದಾರೆ ಎಂದು ತಿಳಿದಿದೆಯಾ ಎನ್ನುವ ಪ್ರಶ್ನೆಗೆ ನಮ್ಮ ಜಮೀನು ಸರ್ವೆ ನಂ.3/8 ಹೊರತುಪಡಿಸಿ ನನಗೆ ಯಾವುದೇ ವಿಚಾರ ತಿಳಿದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಪ್ರಸ್ತುತ ದಾವೆಯಲ್ಲಿ ಯಾವ ಸರ್ವೆ ನಂ.ಜಮೀನ್ನನ್ನು ಕಾಣಿಸಿರುತ್ತಾರೆ ಮತ್ತು ಯಾವೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ವಕೀಲರ ಮೂಲಕ ಕೇಳಿ ತಿಳಿದುಕೊಂಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ. 3/8 ಹೊರತುಪಡಿಸಿ ನನಗೆ ಯಾವುದೇ ವಿಚಾರ ತಿಳಿದಿಲ್ಲ ಎನ್ನುತ್ತಾರೆ.

2. ಸರ್ವೆ ನಂ.3 ಜಮೀನು ಗೋಮಾಳ ಜಮೀನು ಎನ್ನುವ ವಿಚಾರ ತಿಳಿದಿರುತ್ತದೆ. ಸರ್ವೆ ನಂ.3 ಜಮೀನಿನ ಮೂಲ ವಿಸ್ತೀರ್ಣ 133 ಎಕರೆ ಇರುತ್ತದೆ. ಸರ್ವೆ ನಂ.3 ಜಮೀನಿನಲ್ಲಿ ಬಹಳಷ್ಟು ಮಂದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂ.3 ಜಮೀನಿನಲ್ಲಿ ಯಾರು ಎಷ್ಟು ವಿಸ್ತೀರ್ಣದ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.3 ಜಮೀನಿನಲ್ಲಿ ಒಂದು , ಎರಡು , ಮೂರು ಎನ್ನುವ ಹಲವು ಹಿಸ್ಸಾಗಳಿವೆ ಎಂದರೆ ಸರಿ. 1980 ರಲ್ಲಿ ವಾದಿಯು ಸರ್ವೆ ನಂ.3/14 ವಿಸ್ತೀರ್ಣ 22 ಗುಂಟೆ ಜಮೀನ್ನನ್ನು ಮುನಿನಂಜಪ್ಪ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 3/8 ಮತ್ತು ಸರ್ವೆ ನಂ.3/14 ಜಮೀನುಗಳು ಬೇರೆ ಬೇರೆ ಎಂದರೆ ಸರಿ. ಸದರಿ ಸರ್ವೆ ನಂ.3/8 ಮತ್ತು 3/14 ಜಮೀನಿನ ಚಕ್ಕುಬಂದಿಗಳು ಬೇರೆ ಬೇರೆ ಎಂದರೆ ಸಾಕ್ಷಿಯು ನಾನು ಸರ್ವೆ ನಂ.3/14 ನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.3/14 ವಿಸ್ತೀರ್ಣ 22 ಗುಂಟೆ ಜಮೀನಿನ ಪಹಣಿ ಪತ್ರಿಕೆ ವಾದಿಯ ಹೆಸರಿನಲ್ಲಿ ಬರುತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನಿನ ಪೂರ್ವಕ್ಕೆ ಚೌಡಪ್ಪರವರ ಜಮೀನು, ಪಶ್ಚಿಮಕ್ಕೆ ಮಾರಪ್ಪನವರ ಜಮೀನು, ಉತ್ತರಕ್ಕೆ ಹನುಮಂತಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಕಾಲುವೆ ಇದೆ ಎಂದರೆ ನನಗೆ ಗೊತ್ತಿಲ್ಲ.

3. ನನ್ನ ಜಮೀನಿನ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ದಕ್ಷಿಣಕ್ಕೆ ಸರ್ಕಾರಿ ರಾಜಕಾಲುವೆ , ಪಶ್ಚಿಮಕ್ಕೆ ಸರ್ಕಾರಿ ಕೆರೆ, ಉತ್ತರಕ್ಕೆ ಸರ್ವೆ ನಂ.17 ಜಮೀನು ಮತ್ತು ಕತ್ತಿ ಮಾರಮ್ಮನ ದೇವಸ್ಥಾನ, ಮತ್ತು ಪೂರ್ವಕ್ಕೆ ಮುನಿಶ್ಯಾಮಪ್ಪ ಮತ್ತು ಚೌಡಪ್ಪರವರ ಜಮೀನು ಇರುತ್ತದೆ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಯಲ್ಲಿನ ಆಸ್ತಿಯ ಕುರಿತು ದಾಖಲೆಗಳು ಇರುತ್ತವೆ. ಆ ರೀತಿ ಖಾತೆ , ಪಹಣಿ , ಮತ್ತು ಮ್ಯುಟೇಷನ್ ದಾಖಲೆಗಳು ಇರುತ್ತವೆ. ಸದರಿ ಪಹಣಿ ಮತ್ತು ಮ್ಯುಟೇಷನ್ ಗಳಲ್ಲಿ ಚಕ್ಕುಬಂದಿಗಳು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಕ್ಕುಬಂದಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.3/8 ಜಮೀನು ನನ್ನ ತಾತ ಮತ್ತು ಮುತ್ತಾತನವರಿಗೆ ಮಂಜೂರಾಗಿರುತ್ತದೆ. ಆ ರೀತಿ ಸರ್ವೆ ನಂ.3/8 ಜಮೀನು ನನ್ನ ತಾತನಿಗೆ ಮತ್ತು ಮುತ್ತಾತನಿಗೆ ಮಂಜೂರಾಗಿತ್ತು ಎಂದು ತೋರಿಸುವ ಕುರಿತು ಮಂಜೂರಾತಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಎ.ಕೆ.ಮುನಿಕದರಿಗ ಎನ್ನುವವರು ನನ್ನ ತಾತ ಎಂದು ತೋರಿಸುವ ಕುರಿತು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ.3/8 ವಿಸ್ತೀರ್ಣ 2 ಎಕರೆ ಜಮೀನು ಎ.ಕೆ. ಮುನಿಕದರಿಗ ಎನ್ನುವವರ ಹೆಸರಿನಲ್ಲಿ ಇವೆ ಎಂದರೆ ಸರಿ.

4. ಮುನಿಕದರಿಗ ರವರಿಗೆ ಇಬ್ಬರು ಮಕ್ಕಳು ಮತ್ತು ಅವರುಗಳು ಮುನಿಶ್ಯಾಮಿ ಮತ್ತು ಕದಿರಪ್ಪ ಇರುತ್ತಾರೆ. ಸದರಿ ಮುನಿಶ್ಯಾಮಿರವರಿಗೆ ಇಬ್ಬರು ಮಕ್ಕಳು ಮತ್ತು ಅವರುಗಳು ನಾರಾಯಣಪ್ಪ ಮತ್ತು ಮುನಿಯಪ್ಪ. ಕದಿರಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. 2014-15 ನೇ ಸಾಲಿನಲ್ಲಿ ಜಮೀನು ಸರ್ವೆ ನಂ.3/8 ಜಮೀನ್ನನ್ನು ಮುನಿಕದರಿಪ್ಪ ತಂದೆ ಮುನಿಯಪ್ಪ ಎನ್ನುವವರು ಎ.ಕೆ.ಮುನಿಕದರಿಗನ ಏಕ ಮಾತ್ರ ವಾರಸುದಾರ ಎಂದು ಪೌತಿ ಖಾತೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹೆಸರು ಮುನಿಕದರಿಗ. ಪ್ರಸ್ತುತ ದಾವೆಯ ಇತರೆ ಪ್ರತಿವಾದಿಗಳು ಅವರ ಪರವಾಗಿ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನಿಮಗೆ ಯಾವುದಾದರು ಅಧೀಕಾರ ನೀಡಿದ್ದಾರಾ ಎಂದರೆ ಸಾಕ್ಷಿಯು

ನಾನು ಒಬ್ಬನೇ ಓದಿರುವ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ನಾನೊಬ್ಬನೆ ಓದಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.